UASB Library
Newspaper Clippings
Monday 07-03-2022 Pg .1
Jai Kisan

ನಿ ರೈತ ಮಿತ್ರ

ಸ್ಟೈಲೋಸ್ಯಾಂಥಸ್ ಮೇವಿನ ಬೆಳೆ ಬಗ್ಗೆ ತಿಳಿಸಿ?
| ಕೆ. ಮಂಜು ಇಳ್ಳೇನಹಳ್ಳಿ, ತುರುವೇಕೆರೆ ತಾಲ್ಲೂಕು

ಸ್ಟೈಲೋಸ್ಯಾಂಥಸ್ ದ್ವಿದಳ ಜಾತಿಗೆ ಸೇರಿದ ಬಹುವಾರ್ಷಿಕ ಮೇವಿನ ಬೆಳೆಯಾಗಿದ್ದು ಶೇ.16-20 ಕಚ್ಚಾ ಸಸಾರಜನಕ, ಶೇ. 1.7-2.7 ಕ್ಯಾಲ್ಸಿಯಂ, ಶೇ. 0.16-0.32 ರಂಜಕ ಮತ್ತು ಶೇ. 0.28-0.41 ಮ್ಯಾಗ್ನಿಷಿಯಂ ಅಂಶವನ್ನು ಹೊಂದಿದೆ.

ತಳಿಗಳು: ಸ್ಟೈಲೋ ಹೆಮಾಟ, ಸ್ಟೈಲೋ ಸ್ಕಾಬ್ರಾ, ಸ್ಟೈಲೋ ಸಿಬ್ರಾನಾ

ಬೇಸಾಯ ಕ್ರಮ: ಪ್ರತಿ ಎಕರೆಗೆ 4 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಅನ್ನು 15-20 ದಿನಗಳ ಮುಂಚೆ ಮಣ್ಣಿಗೆ ಸೇರಿಸಿ ಉಳಮೆ ಮಾಡಿ ಭೂಮಿಯನ್ನು ಹದ ಮಾಡಿದ ನಂತರ ಎಕರೆಗೆ ಬೇಕಾದ (4 ಕಿ.ಗ್ರಾಂ) ಬಿತ್ತನೆ ಬೀಜವನ್ನು 45 ಕಿ.ಗ್ರಾಂ ಡಿಎಪಿ ಮತ್ತು 20 ಕಿಗ್ರಾಂ ಪೋಟ್ಯಾಷ್ (ಎಂಓಪಿ) ಅನ್ನು ಸಾಲುಗಳಲ್ಲಿ (1.5 ಅಡಿ ಅಂತರದ) ಬಿತ್ತನೆ ಮಾಡುವುದು.

ನೀರಾವರಿ: ಬಿತ್ತನೆ ಮಾಡಿದಾಗ ತೆಳುವಾಗಿ ನೀರು ಹಾಯಿಸುವುದು, ಆನಂತರ ಮಣ್ಣಿನ ತೇವಾಂಶಕ್ಕನುಗುಣವಾಗಿ 8-10 ದಿನಗಳಿಗೊಮ್ಮೆ ನೀರು ಕೊಡುವುದು ಸೂಕ್ತ.

ಮೇವಿನ ಇಳುವರಿ: 20-22 ಟನ್ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ (6-7 ಕಟಾವು)

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ಭೂಮಿ ಹೆಪ್ಪುಗಟ್ಟುವುದರಿಂದ ಆಗುವ ಪರಿಣಾಮ ಹಾಗೂ ಇದರ ನಿರ್ವಹಣೆ ಹೇಗೆ ತಿಳಿಸಿ?
| ಶಿವಾನಂದ ಹಿರಿಯೂರು ತಾಲೂಕು

ಕೆಂಪು ಮಣ್ಣಿನಲ್ಲಿ ಜೇಡಿನ ಅಂಶ ಹೆಚ್ಚಾಗಿದ್ದಾಗ ಮಳೆ/ ನೀರಾವರಿಯ ನಂತರ ಒಣಗಿದಾಗ, ಮೇಲಿನ ಪದರವು ಗಟ್ಟಿಯಾಗಿ ಬಿಡುತ್ತದೆ. ಈ ಕ್ರಿಯೆಗೆ ಭೂಮಿ ಹೆಪ್ಪು ಕಟ್ಟುವುದು ಎಂದು ಕರೆಯುವರು. ಇಂತಹ ಸಂದರ್ಭಗಳಲ್ಲಿ ಮಣ್ಣಿನಲ್ಲಿರುವ ಕಾರ್ಬೋನೇಟ್ಸ್ ಎಂಬ ಸಂಯುಕ್ತ ಪದಾರ್ಥಗಳು ಜೇಡಿ ಕಣಗಳೊಂದಿಗೆ ಬೆರೆತು ಈ ತರಹದ ಗಟ್ಟಿ ಪದರ ಸೃಷ್ಟಿಯಾಗುತ್ತದೆ. ಸಾಮಾನ್ಯವಾಗಿ ಇದನ್ನು ಕೆಂಪು ಮಣ್ಣಿನಲ್ಲಿ ಕಂಡರೂ, ಅಲ್ಲಲ್ಲಿ ಕಪ್ಪು ಮಣ್ಣಿನಲ್ಲೂ ಕಾಣಬಹುದು. ಮಣ್ಣು ಹೆಪ್ಪುಗಟ್ಟುವುದರಿಂದ, ಬೀಜ ಮೊಳಕೆ ಹೊಡೆದು ಮೇಲೆ ಬರದೇ ಮಣ್ಣಿನೊಳಗೇ ಸಾಯಬಹುದು; ಮಳೆ ನೀರು ಇಂಗದೇ ಹರಿದು ಹೋಗಿ ಪೋಲಾಗುವುದು. ಮುಖ್ಯವಾಗಿ ಈ ಸಮಸ್ಯೆ ಮಣ್ಣಿನ ಸಾವಯವ ಇಂಗಾಲದ ಅಭಾವದಿಂದಾಗುವುದು. ಆದ್ದರಿಂದ ಸಾವಯವ ಇಂಗಾಲದ ಪ್ರಮಾಣ ಹೆಚ್ಚಿಸಲು ಹಸಿರೆಲೆ ಗೊಬ್ಬರ, ಸಗಣಿ ಗೊಬ್ಬರ ಅಥವಾ ಸುಣ್ಣ ಮಿಶ್ರಿತ ಕೃಷಿ- ತ್ಯಾಜ್ಯ ವಸ್ತುಗಳ ನೇರ ಉಪಯೋಗದಿಂದ ಈ ಹೆಪ್ಪುಗಟ್ಟುವಿಕೆಯನ್ನು ನಿಯಂತ್ರಿಸಬಹುದು.

| ಡಾ. ವಾಸಂತಿ ಬಿ.ಜಿ. ಮಣ್ಣು ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

07-03-2022 Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

07-03-2022 Kp Pg 09

ಅಗೌರವ 2021ನೇ ಸಾಲಿನ ರೈತರಿಗೆ ಪ್ರಶಸ್ತಿ ಪ್ರದಾನ ಮಾಡದೇ ಅವಮಾನ | ಕೇಳಿದ್ದಕ್ಕೆ ವಾಟ್ಸ್‌ಆ್ಯಪ್‌ನಲ್ಲೇ ಪ್ರಮಾಣಪತ್ರ

ವಾಟ್ಸ್‌ಆ್ಯಪ್‌ನಲ್ಲೇ 'ಕೃಷಿ ಪಂಡಿತ ಪ್ರಶಸ್ತಿ' ಕೊಟ್ಟ ಸರ್ಕಾರ!

• **ನಾರಾಯಣ ಹೆಗಡೆ**
ಕನ್ನಡಪ್ರಭ ವಾರ್ತೆ ಹಾವೇರಿ

ರೈತ ಸಾಧಕರಿಗೆ ಸರ್ಕಾರದಿಂದ ಕೊಡಮಾಡುವ ಪ್ರತಿಷ್ಠಿತ 'ಕೃಷಿ ಪಂಡಿತ ಪ್ರಶಸ್ತಿ' ಪ್ರದಾನ ಮಾಡದೇ ಪ್ರಮಾಣಪತ್ರವನ್ನು ವಾಟ್ಸ್‌ಆ್ಯಪ್‌ನಲ್ಲೇ ಕಳುಹಿಸಿ ಅಗೌರವ ತೋರಲಾಗಿದೆ.

2020-21ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ರಾಜ್ಯಮಟ್ಟದ 'ಕೃಷಿ ಪಂಡಿತ', 'ಉದಯೋನ್ಮುಖ ಕೃಷಿ ಪಂಡಿತ' ಪ್ರಶಸ್ತಿಗೆ ರೈತರನ್ನು ಆಯ್ಕೆ ಮಾಡಿದ್ದ ಸರ್ಕಾರ, ಕೋವಿಡ್ ಕಾರಣಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಿಲ್ಲ. ಪ್ರಶಸ್ತಿ ಘೋಷಣೆಯಾಗಿ ವರ್ಷ ಕಳೆದರೂ ಗೌರವಿಸದ ಇಲಾಖೆ ಬಗ್ಗೆಯೇ ಸಾಧಕರೈತರು ಅಸಮಾಧಾನವ್ಯಕ್ತಪಡಿಸುತ್ತಿದ್ದರು. ಪ್ರಶಸ್ತಿ ಮೊತ್ತವನ್ನು ರೈತರ ಖಾತೆಗೆ ಹಾಕಿದ್ದ ಇಲಾಖೆ, ಪ್ರಮಾಣಪತ್ರವನ್ನು ವಾಟ್ಸ್‌ಆ್ಯಪ್‌ನಲ್ಲೇ ಕಳುಹಿ ಸಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ವರ್ಷದ ಹಿಂದೆಯೇ ಘೋಷಣೆ: ನೀರಿನ ಬಳಕೆ, ಸಾವಯವ ಕೃಷಿ, ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ, ಸಮಗ್ರ ಕೃಷಿ ಪದ್ಧತಿ, ಬೆಳೆ ವೈವಿಧ್ಯ ಮುಂತಾದ ಅಂಶಗಳನ್ನಿಟ್ಟುಕೊಂಡು ಹಾನಗಲ್ ತಾಲೂಕು ಬೈಚುವಳ್ಳಿ ಗ್ರಾಮದ ರಾಜೀವ ದಾನಪ್ಪನವರ ಅವರನ್ನು 'ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಕಳೆದ ಮಾರ್ಚ್‌ನಲ್ಲೇ ಪ್ರಶಸ್ತಿ ಘೋಷಿಸಿ, ಕೆಲವೇ ದಿನಗಳಲ್ಲಿ ಅವರ ಖಾತೆಗೆ ಪ್ರಶಸ್ತಿ ಮೊತ್ತ ₹50 ಸಾವಿರ ಹಾಕಲಾಗಿದೆ.

ಕೋವಿಡ್ ಕಾರಣ ನೀಡಿ ಸಮಾರಂಭ ಆನಂತರ ಮಾಡುತ್ತೇವೆ ಎಂದು ಅಧಿಕಾರಿಗಳು ಹೇಳುತ್ತಿದ್ದರು. ಬೇಸರಗೊಂಡ ರಾಜೀವ ಪ್ರಶಸ್ತಿ ಪತ್ರವನ್ನಾದರೂ ನೀಡಿ ಎಂದು ಅಧಿಕಾರಿಗಳಿಗೆ ಪತ್ರ ಬರೆದರು. ಆವರಿಂದ ಸಿಕ್ಕ ಸ್ಪಂದನೆ ನೋಡಿ ಮತ್ತಷ್ಟು ಗಾಬರಿಯಾಗಿದ್ದಾರೆ. ಪ್ರಮಾಣಪತ್ರ ವಾಟ್ಸ್‌ಆ್ಯಪ್‌ನಲ್ಲೇ ಕಳುಹಿಸಿದ್ದಾರೆ!

ಆದರಲ್ಲಿ ಫೋಟೋ, ದಿನಾಂಕವೂ ಇರಲಿಲ್ಲ. ಅದನ್ನು ಆಕ್ಷೇಪಿಸಿದ್ದಕ್ಕೆ ಫೋಟೋ ಹಾಕಿ ಮತ್ತೊಂದು ಪ್ರಮಾಣಪತ್ರವನ್ನು ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ್ದಾರೆ. ಅಸಮಾಧಾನ ಗೊಂಡಿರುವ ದಾನಪ್ಪನವರ, ಪ್ರಶಸ್ತಿ, ಆದರ ಮೊತ್ತವನ್ನು ವಾಪಸ್ ಮಾಡುತ್ತೇನೆ ಎಂದಿದ್ದಾರೆ.



ವಾಟ್ಸ್‌ಆ್ಯಪಲ್ಲಿ ಬಂದಿರುವ ಕೃಷಿ ಪಂಡಿತ ಪ್ರಶಸ್ತಿ ಪ್ರಮಾಣಪತ್ರ.


ನಮ್ಮ ಹೊಲಕ್ಕೆ ಬಂದು ನಾನು ಮಾಡಿದ ಕೃಷಿಯನ್ನು ನೋಡಿ 2020-21ನೇ ಸಾಲಿಗೆ ರಾಜ್ಯಮಟ್ಟದ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿಗೆ ನನ್ನ ಆಯ್ಕೆ ಮಾಡಲಾಗಿತ್ತು. ಬ್ಯಾಂಕ್ ಖಾತೆಗೆ ಪ್ರಶಸ್ತಿ ಹಣ ಹಾಕಿದ್ದಾರೆ. ಆದರೆ, ಸಮಾರಂಭ ಮಾಡಿ ಪ್ರಶಸ್ತಿ ಪ್ರದಾನ ಮಾಡಿದ್ದರೆ ನಮಗೂ, ಇಲಾಖೆಗೂ ಗೌರವ ಬರುತ್ತಿತ್ತು. ಬಹಳ ಸಲ ಒತ್ತಾಯಿಸಿದ ಮೇಲೆ ವಾಟ್ಸ್‌ಆ್ಯಪ್‌ನಲ್ಲೇ ಪ್ರಮಾಣಪತ್ರ ಕಳುಹಿಸಿದ್ದಾರೆ.

• **ರಾಜೀವ ದಾನಪ್ಪನವರ**
ಪ್ರಶಸ್ತಿಗೆ ಆಯ್ಕೆಯಾಗಿರುವ ರೈತ


ರೈತರಿಗೆ 'ಕೃಷಿ ಪಂಡಿತ', 'ಉದಯೋನ್ಮುಖ ಕೃಷಿ ಪಂಡಿತ' ಪ್ರಶಸ್ತಿಯನ್ನು ಕಳೆದ ಸಾಲಿನಲ್ಲಿ ಕೊಟ್ಟಿಲ್ಲ. ವಾಟ್ಸ್‌ಪ್‌ನಲ್ಲಿ ರೈತರಿಗೆ ಪ್ರಮಾಣ ಪತ್ರ ಕಳುಹಿಸಿರುವ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಪರಿಶೀಲಿಸುತ್ತೇನೆ.

• **ಬಿ.ಸಿ.ಪಾಟೀಲ್** ಕೃಷಿ ಸಚಿವ.

ರೈತರನ್ನು ಅವಮಾನಿಸಬೇಕು ಎಂಬ ಉದ್ದೇಶ ಇಲಾಖೆಗಿಲ್ಲ. ವಾಟ್ಸ್‌ಆ್ಯಪ್‌ನಲ್ಲಿ ಪ್ರಮಾಣಪತ್ರ ನೀಡಿರುವುದು ತಮಗೆ ಗೊತ್ತಿಲ್ಲ. ಮೇಲಧಿಕಾರಿಗಳ ಗಮನಕ್ಕೆ ತರುತ್ತೇನೆ.

• **ಮಂಜುನಾಥ್** ಜಂಟಿ ಕೃಷಿ ನಿರ್ದೇಶಕ, ಹಾವೇರಿ

ಬೆಂಗ್ಳೂರಲ್ಲಿ ದೇಶದ ಎಲ್ಲ ಮಾವು ವ್ಯಾಪಾರಿಗಳ ಸಭೆ

ರಾಜ್ಯದ ಮಾವಿಗೆ ಉತ್ತಮ ಬೆಲೆ ದೊರಕಿಸಲು ಮಾವು ನಿಗಮದ ಯತ್ನ | ಈ ತಿಂಗಳ ಕೊನೆ ವಾರದಲ್ಲಿ ಸಭೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ಮಾವಿನ ಹಣ್ಣಿಗೆ ದೇಶದಾದ್ಯಂತ ಬೇಡಿಕೆ ಸೃಷ್ಟಿಸುವ ಸಲುವಾಗಿ ದೇಶದ ಎಲ್ಲ ರಾಜ್ಯಗಳ ಮಾವು ವ್ಯಾಪಾರಸ್ಥರ ಸಭೆ ನಡೆಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿರ್ಧರಿಸಿದೆ.



ರಾಜ್ಯದಲ್ಲಿ ಪ್ರತಿ ವರ್ಷ 14 ಲಕ್ಷ ಟನ್ ಮಾವು ಬೆಳೆಯಲಾಗುತ್ತಿದೆ. ಆದರೆ, ಈ ಮಾವಿಗೆ ಉತ್ತಮ ಮಾರುಕಟ್ಟೆ ಲಭ್ಯವಾಗದ ಪರಿಣಾಮ ಕೆಲ ಸಂದರ್ಭಗಳಲ್ಲಿ ರೈತರಿಗೆ ನಷ್ಟ ಉಂಟಾಗುತ್ತದೆ. ಆದ್ದರಿಂದ ಸೂಕ್ತ ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು ಅನಿವಾರ್ಯವಿದೆ. ಈ ನಿಟ್ಟಿನಲ್ಲಿ ದೇಶದ ಎಲ್ಲ ರಾಜ್ಯಗಳ ಮಾವು ವ್ಯಾಪಾರಿಗಳ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಮಾವು ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಾಜ್ಯದ ಮಾವಿಗೆ ಉತ್ತರ ಭಾರತದಲ್ಲಿ ಹೆಚ್ಚಿನ ಬೇಡಿಕೆ ಇದೆ. ಆದರೆ, ಕೆಲವೇ ವ್ಯಾಪಾರಿಗಳು ಖರೀದಿಗಾಗಿ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ವ್ಯಾಪಾರಿಗಳ ಸಂಖ್ಯೆ ವೃದ್ಧಿಯಾಗುತ್ತಿಲ್ಲ. ಹೀಗಾಗಿ ಮಾರ್ಚ್ ನಾಲ್ಕನೇ ವಾರದಲ್ಲಿ ಬೆಂಗಳೂರು ನಗರದಲ್ಲಿ ರಾಷ್ಟ್ರ ಮಟ್ಟದ ಮಾವು ವ್ಯಾಪಾರಿಗಳ ಸಭೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಈ ಸಭೆಯಲ್ಲಿ ರಾಜ್ಯದ ಮಾವು ಬೆಳೆಯುವ ರೈತ ಮುಖಂಡರು, ರೈತ ಉತ್ಪಾದಕ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ರೈತರು ಮತ್ತು ವ್ಯಾಪಾರಿಗಳ ನಡುವೆ ಇದೇ ವೇಳೆ ಒಡಂಬಡಿಕೆ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ. ಇದರಿಂದ ರಾಜ್ಯದ ಮಾವು ಬೆಳೆಗಾರರಿಗೆ ಉತ್ತಮ ಬೆಲೆ ಲಭ್ಯವಾಗುವ ನಿರೀಕ್ಷೆಯಿದೆ ಎಂದು ಮಂಡಳಿಯ ಅಧ್ಯಕ್ಷ ಕೆ.ವಿ.ನಾಗರಾಜ್ 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದರು.

ಮತ್ತೆ ಮಾವು ಮೇಳ: ಕೊರೋನಾ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಮಾವು ಮೇಳ ಸ್ಥಗಿತಗೊಂಡಿತ್ತು. ಇದೀಗ ಮತ್ತೆ ಪುನರಾರಂಭಿಸಲು ನಿರ್ಧರಿಸಲಾಗಿದೆ. ಮೇ ತಿಂಗಳಲ್ಲಿ ನಗರದ ಲಾಲ್‌ಬಾಗ್, ಕಬ್ಬನ್ ಪಾರ್ಕ್, ಐಟಿ ಕಂಪೆನಿಗಳ ಆವರಣ ಸೇರಿದಂತೆ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಮೇಳ ಆಯೋಜನೆಗೆ ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಬೆಂಗಳೂರು ನಗರದ ಗ್ರಾಹಕರಿಗೆ ರಾಸಾಯನಿಕ ಮುಕ್ತ ಮಾವು ಲಭ್ಯವಾಗುವಂತೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಕೋಲಾರಕ್ಕೆ ಸಂಸ್ಕರಣ ಘಟಕ ಸಿಗಲಿಲ್ಲ

ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಮಾವು ಬೆಳೆಯ ಲಾಗುತ್ತಿದೆ. ಈ ಜಿಲ್ಲೆಗಳು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಒಂದೊಂದು ಮಾವು ಸಂಸ್ಕರಣಾ ಘಟಕ ಸ್ಥಾಪಿಸಲು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ, ಉತ್ತರ ಕರ್ನಾಟದಲ್ಲಿ ಮಾತ್ರ ಮಾವು ಸಂಸ್ಕರಣಾ ಘಟಕ ಪ್ರಾರಂಭಿಸಲು ಬಜೆಟ್ಟಲ್ಲಿ ಘೋಷಿಸಲಾಗಿದೆ. ಈ ಬೆಳವಣಿಗೆ ಚಿಕ್ಕಬಳ್ಳಾಪುರ-ಕೋಲಾರ ಜಿಲ್ಲೆಯ ಮಾವು ಬೆಳೆಗಾರರಿಗೆ ತೀವ್ರ ನಿರಾಸೆ ಉಂಟುಮಾಡಿದೆ ಎಂದು ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್ ತಿಳಿಸಿದರು.

07-02-2022
Kp Pg 09

07-02-2022
Vv Pg 11

ಪ್ರತಿಷ್ಠಿತ ಕೆಲಸಕ್ಕೆ ಬೈ ಸ್ವಯಂ ವೃತ್ತಿಗೆ ಜೈ



ಹೆಸರಿಗೆ ಪ್ರತಿಷ್ಠಿತ ಕಂಪನಿಯಾಗಿದ್ದರೂ ಪ್ರತಿಭೆಗೆ ತಕ್ಕ ಪ್ರೋತ್ಸಾಹ ಸಿಗದಿದ್ದಾಗ, ಏನಾದರೂ ಸಾಧಿಸಲೇಬೇಕೆಂದು ಹಠತೊಟ್ಟ ಯುವಕನೊಬ್ಬ ಇದೀಗ ಸ್ವಾವಲಂಭಿಯಾಗಿ ದ್ವಿಚಕ್ರ ವಾಹನ ಹಾಗೂ ಕೃಷಿ ಯಂತ್ರೋಪಕರಣಗಳನ್ನು ಸ್ವತಃ ತಯಾರಿಸುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ಬಿಳಿಗೇರಿಯ ಎನ್.ಕೆ.ಆಕಾಶ್ ಈ ಸಾಧಕ. ತನ್ನ ಮನೆಯ ಅಂಗಳದಲ್ಲೇ ಗ್ಯಾರೇಜ್ ಮಾಡಿಕೊಂಡಿದ್ದು, ಮಿನಿ ಬೈಕ್, ಕೃಷಿಕರಿಗೆ ಉಪಯೋಗವಾಗುವ ಹಲವು ಯಂತ್ರೋಪಕರಣಗಳನ್ನು ತಯಾರಿಸಿ ಯಶಸ್ವಿಯಾಗಿದ್ದಾರೆ. ಚಿಕ್ಕ ವಯಸ್ಸಿನಿಂದಲೂ ಮೆಕ್ಯಾನಿಕಲ್‌ನಲ್ಲಿ ಅತೀವ ಆಸಕ್ತಿ ಹೊಂದಿದ್ದ ಆಕಾಶ್, ಸಣ್ಣಪುಟ್ಟ ಬೈಕ್‌ಗಳನ್ನು ತಯಾರಿಸಿದ್ದರು. ಬೇರೆ ಬೇರೆ ಕಂಪನಿಗಳ ಬೈಕ್ ಹಾಗೂ ಕಾರುಗಳನ್ನು ನೋಡುವಾಗ ತನಗೂ ಈ ರೀತಿ ಮಾಡಬೇಕೆಂಬ ಉತ್ಸಾಹ ಬಂತು. ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಆಯ್ಕೆಯಾಗಿ ಟಾಟಾ ಮೋಟಾರ್ಸ್, ಮಾರುತಿ, ಬೋಶ್, ಟಿವಿಎಸ್ ಸೇರಿ ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅನುಭವ ಪಡೆದುಕೊಂಡು ಇದೀಗ ಸ್ವಂತ ಉದ್ಯಮ ಆರಂಭಿಸಲು ನಿರ್ಧಾರ ತೆಗೆದುಕೊಂಡಿದ್ದಾರೆ.

ಆಕಾಶ್ ಮನೆಯ ಅಂಗಳದ ಶೆಡ್‌ನಲ್ಲಿ ಬೈಕ್ ಹಾಗೂ ಕೃಷಿ ಯಂತ್ರೋಪಕರಣಗಳನ್ನು ತಯಾರಿಸುವಲ್ಲಿ ನಿರತರಾಗಿದ್ದಾರೆ. ಮೋಟಾರ್ ಸ್ಕೂಟರ್‌ಗಳಲ್ಲಿ ಹೆಸರಾಗಿರುವ ಗೋಕಾರ್ಟ್ ಅನ್ನು ತಾವೇ ತಯಾರಿಸುವ ಮೂಲಕ ಗಮನ ಸೆಳೆದಿದ್ದಾರೆ. ಆರಂಭದಲ್ಲಿ ಪೆಡಲ್ ಮಾಡುವ ವಾಹನವನ್ನು ನಿರ್ಮಿಸಿದ್ದರು. ತನ್ನ ಅಜ್ಜ ಮಹಾಭಲೇಶ್ವರ ಭಟ್, ಈ ವಾಹನ ಅಂಗಳದಲ್ಲಿ ಮಾತ್ರ ಓಡಿಸಲು ಸಾಧ್ಯ. ರಸ್ತೆಗೆ ಹೋಗಲು ಸಾಧ್ಯವೇ ಎಂದು ಪ್ರಶ್ನಿಸಿದ್ದರು. ಇದರಿಂದ ಆಕಾಶ್ ಹೊಸ ಪ್ರಯೋಗಗಳನ್ನು ಮಾಡಲು ತೊಡಗಿಸಿಕೊಂಡರು. ಮಿನಿ ಬೈಕ್, ಕೃಷಿ ಯಂತ್ರೋಪಕರಣಗಳನ್ನೂ ಮಾಡಿ ಸಾಧನೆ ಮಾಡಿದರು. ಮುಂದಿನ ದಿನಗಳಲ್ಲಿ ಹಲವು ಮಾದರಿಯ ವಾಹನಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನು ನಿರ್ಮಿಸಬೇಕೆಂಬ ಉದ್ದೇಶವನ್ನು ಆಕಾಶ್ ಹೊಂದಿದ್ದಾರೆ. ಈವರೆಗೆ ಆರು ಬೈಕ್‌ಗಳನ್ನು ನಿರ್ಮಿಸಿದ್ದು, ಹೋಂಸ್ಟೇ, ರೆಸಾರ್ಟ್‌ಗಳಲ್ಲಿ ಮನರಂಜನೆಗಾಗಿ ಓಡಿಸುವ ವಾಹನಗಳನ್ನು ತಯಾರಿಸಿದ್ದಾರೆ.

ಎಲೆಕ್ಟ್ರಿಕಲ್ ಕಾರು ತಯಾರಿ

ಪುತ್ತೂರಿನ ಮಾಣಿಯಲ್ಲಿ ಎಲೆಕ್ಟ್ರಿಕಲ್ ಕಾರು ತಯಾರಿಸಿದ್ದಾರೆ. ಈ ಕಾರನ್ನು 3 ಗಂಟೆ ಚಾರ್ಜ್ ಮಾಡಿದರೆ 70 ಕಿ.ಮೀ. ಓಡಿಸಬಹುದಾಗಿದೆ. 1.50 ಲಕ್ಷ ರೂ. ವೆಚ್ಚದಲ್ಲಿ ಈ ಕಾರು ನಿರ್ಮಾಣಗೊಂಡಿದೆ. ಹಳೆಯ ಗುಜರಿ ವಸ್ತುಗಳನ್ನು ಹಾಗೂ ವಿವಿಧ ವಾಹನಗಳ ಬಿಡಿ ಭಾಗಗಳಿಂದ ಮಿನಿ ಬೈಕ್ ತಯಾರಿಸಿದ್ದು ವಿಶೇಷ ಆಕರ್ಷಣೆಯಾಗಿದೆ. ಈ ಬೈಕ್‌ಗೆ 28 ಸಾವಿರ ರೂ. ವೆಚ್ಚ ಮಾಡಿದ್ದಾರೆ. ವಿತ್‌ಔಟ್ ಗೇರ್ ಬೈಕ್ ಆಗಿದ್ದು, ಯಾರು ಬೇಕಾದರೂ ಚಾಲನೆ ಮಾಡಬಹುದು. ಇದುವರೆಗೆ 6 ಬೈಕ್, 2 ಸ್ಕೂಟರ್, ಸಾಮಗ್ರಿ ಸಾಗಿಸುವ 4 ಟ್ರಾಲಿಗಳನ್ನು ತಯಾರಿಸಿ ಮಾರಾಟ ಮಾಡಿದ್ದಾರೆ. ಬೈಕ್ ವಿಶೇಷವಾಗಿದ್ದು ನೋಡಲು ಆಕರ್ಷಕವಾಗಿದೆ. ಇದುವರೆಗೆ ಇಂಧನ ಚಾಲಿತ ವಾಹನಗಳನ್ನು ತಯಾರು ಮಾಡಿರುವ ಆಕಾಶ್, ಇದೀಗ ಬ್ಯಾಟರಿ ಚಾಲಿತ ವಾಹನಗಳನ್ನು ತಯಾರು ಮಾಡುವ ಯೋಜನೆ ಹಮ್ಮಿಕೊಂಡಿದ್ದಾರೆ.

ಗ್ರಾಹಕರಿಂದ ಆರ್ಡರ್ ಬಂದರೆ ಅವರ ಅಭಿರುಚಿಗೆ ತಕ್ಕಂತೆ ಬೈಕ್ ಹಾಗೂ ಕೃಷಿ ಯಂತ್ರೋಪಕರಣಗಳನ್ನು ನಿರ್ಮಿಸಿಕೊಡುತ್ತೇನೆ. ಇತ್ತೀಚಿನ ದಿನಗಳಲ್ಲಿ ಕೂಲಿ ಕೆಲಸಕ್ಕೆ ಕೆಲಸಗಾರರು ಸಿಗುತ್ತಿಲ್ಲ. ಅಲ್ಲದೆ, ಕೃಷಿಕರು ಹಲವು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಕೃಷಿಕರಿಗೆ ಉಪಯೋಗವಾಗುವ ಯಂತ್ರೋಪಕರಣಗಳನ್ನು ತಯಾರಿಸಿ ಕೃಷಿಕರ ಹೊರೆಯನ್ನು ನೀಗಿಸುವುದು ಹಾಗೂ ಅವರಿಗೆ ಕಡಿಮೆ ದರದಲ್ಲಿ ಯಂತ್ರಗಳನ್ನು ನೀಡುವುದು ನನ್ನ ಗುರಿ.

| ಆಕಾಶ್ ಬೈಕ್ ತಯಾರಕ





"ಬೈಕ್ ಹಾಗೂ ಸಣ್ಣ ಕಾರುಗಳು ರೆಸಾರ್ಟ್, ಹೋಂಸ್ಟೇಗಳಲ್ಲಿ ಉಪಯೋಗಿಸಲು ಹೇಳಿ ಮಾಡಿಸಿದಂತಿವೆ. ಈ ಹಿನ್ನೆಲೆಯಲ್ಲಿ ಆಕಾಶ್ ರೆಸಾರ್ಟ್‌ಗಳಿಗೆ ತನ್ನ ವಾಹನಗಳನ್ನು ಮಾರಾಟ ಮಾಡಿದ್ದಾನೆ. ಜತೆಗೆ ಏಲಕ್ಕಿ ಹಾಗೂ ಕಾಳುಮೆಣಸು ಒಣಗಿಸುವ ಯಂತ್ರ, ಮೆಣಸು ಬಿಡಿಸುವ ಯಂತ್ರ ತಯಾರು ಮಾಡುತ್ತಿರುವುದು ವಿಶೇಷ. ಮಗನ ಪ್ರತಿಭೆ ಹೊರ ಜಗತ್ತಿಗೆ ಗೊತ್ತಾದರೆ ಸಾಕು. ಅವಕಾಶಗಳು ತಾನಾಗಿಯೇ ಬರಬಹುದು.

| ಎನ್.ಎಂ.ಕುಮಾರ್ ಆಕಾಶ್ ತಂದೆ

ಕೃಷಿ ಇಲಾಖೆಯಲ್ಲಿ ಶೀಘ್ರ ಸಿಬ್ಬಂದಿ ನೇಮಕಾತಿ ಕೈಗೊಳ್ಳಿ

ಕೃಷಿ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದರೂ ಹೊಸ ನೇಮಕಾತಿ ಬಗ್ಗೆ 2022-23ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸದಿರುವುದು ದುರದೃಷ್ಟಕರ. ಕೃಷಿ ಇಲಾಖೆಯ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆಯಿಂದ ರೈತರಿಗೆ ಅನೇಕ ಸೌಲಭ್ಯಗಳು ಸಿಗುತ್ತಿಲ್ಲ. ಈ ಕೊರತೆಯನ್ನು ನೀಗಿಸುವುದಕ್ಕಾಗಿ ಡಿಪ್ಲೊಮಾ ಕೃಷಿ ಮತ್ತು ಕೃಷಿ ತಾಂತ್ರಿಕತೆ ಎಂಬ ಎರಡು ವೃತ್ತಿ ಶಿಕ್ಷಣಕ್ಕೆ 2009-10ರಲ್ಲಿ ಸರಕಾರ ಕೋರ್ಸ್‌ಗಳನ್ನು ಪ್ರಾರಂಭಿಸಿತು. ರಾಜ್ಯದ ಹೋಬಳಿ ಮಟ್ಟದಲ್ಲಿ ಕೃಷಿ ಇಲಾಖೆಯ ಅಡಿಯಲ್ಲಿ ಕೆಲಸ ನಿರ್ವಹಿಸಲು ಡಿಪ್ಲೊಮಾ ಕೃಷಿ ಪದವೀಧರರಿಗೆ ಕೃಷಿ ಸಹಾಯಕ(ರೈತಮಿತ್ರ) ಹುದ್ದೆಗಳನ್ನು ಸೃಷ್ಟಿಸಿ ಉದ್ಯೋಗ ನೀಡುತ್ತೇವೆ ಎಂದು ಹಾಲಿ ಸಚಿವರು ಎರಡು ವರ್ಷಗಳಿಂದ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಯಾವೊಂದು ನೇಮಕಾತಿಯು ಆಗಿಲ್ಲ. ಸುಮಾರು 5000 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಇವರು ಕೃಷಿ ಸಂಬಂಧಿತ 31 ವಿಷಯಗಳನ್ನು ಅಧ್ಯಯನ ಮಾಡಿದ್ದಾರೆ. ಇನ್ನಾದರೂ ವಯೋಮಿತಿ ಮೀರುವುದರೊಳಗಾಗಿ ನೇಮಕಾತಿ ಕೈಗೊಳ್ಳಬೇಕು.

ದಾವಣಗೆರೆ

ದಿಲೀಪ್ ಸಿದ್ಧನೂರು

07-02-2022 Vk Pg 01

07-02-2022 Pv Pg 04

ಸೂರ್ಯಕಾಂತಿ ಎಣ್ಣೆಯ ಬೆಲೆ ಹೆಚ್ಚಳ

ಬೆಂಗಳೂರು: ಉಕ್ರೇನ್ ಬಿಕ್ಕಟ್ಟಿನ ಕಾರಣ ರಾಜ್ಯದಲ್ಲಿ ಸೂರ್ಯಕಾಂತಿ ಎಣ್ಣೆಯ ಬೆಲೆ ಏರುಗತಿಯಲ್ಲಿದ್ದು, ಒಂದು ವಾರದಲ್ಲಿ ಲೀಟರ್ ದರ ₹130 ರಿಂದ ₹170ಕ್ಕೆ ಹೆಚ್ಚಳವಾಗಿದೆ.

ಭಾರತಕ್ಕೆ ಉಕ್ರೇನ್ ದೇಶವು ಸೂರ್ಯಕಾಂತಿ ಎಣ್ಣೆಯನ್ನು ಪೂರೈಸುವ ಪ್ರಮುಖ ದೇಶವಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಿಂದಾಗಿ ಪೂರೈಕೆಯ ಸರಪಳಿಯಲ್ಲಿ ವ್ಯಾಪಾರಸ್ಥರಿಗೆ ಅಡೆತಡೆ ಎದುರಾಗಿದೆ. ಇದರಿಂದ ಸೂರ್ಯಕಾಂತಿ ಎಣ್ಣೆಯ ಬೆಲೆಯಲ್ಲಿ ಹೆಚ್ಚಳ ಕಂಡು ಬಂದಿದೆ. ಯುದ್ಧವು ಉಲ್ಬಣಗೊಳ್ಳುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಎಣ್ಣೆಯ ಬಿಸಿ ಮತ್ತಷ್ಟು ತಟ್ಟಲಿದೆ ಎಂದು ವ್ಯಾಪಾರಿಗಳು ಎಚ್ಚರಿಸಿದ್ದಾರೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಸೂರ್ಯಕಾಂತಿ ಎಣ್ಣೆಯು ಎಲ್ಲಾ ಅಡುಗೆ ಎಣ್ಣೆ ಆಮದುಗಳಲ್ಲಿ ಸುಮಾರು ಶೇ 15 ರಷ್ಟು ಪಾಲು ಹೊಂದಿದೆ.

'ಕರ್ನಾಟಕವು 25,000-30,000 ಟನ್ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಪೂರೈಕೆಯಲ್ಲಿನ ಕೊರತೆಯು ಬೆಲೆಯ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಸೂರ್ಯಕಾಂತಿ ಎಣ್ಣೆಯ ಸಗಟು ದರ ಲೀಟರ್‌ಗೆ ₹40ರಷ್ಟು ಏರಿಕೆಯಾಗಿದೆ. ಆದರೆ ಇದು ಇನ್ನೂ ಸಂಪೂರ್ಣವಾಗಿ ಚಿಲ್ಲರೆ ಮಾರುಕಟ್ಟೆ ಮೇಲೆ ಪರಿಣಾಮ ಬೀರಿಲ್ಲ' ಎಂದು ಯಲಹಂಕದ ಕೃಷ್ಣಂ ಆಯಿಲ್ ಟ್ರೇಡರ್ಸ್‌ನ ಕೃಷ್ಣಂ ಶಶಿಧರ್ ಹೇಳಿದರು.

Sunflower oil price shoots up in state as war rages far way

JAHNAVI R
BENGALURU, DHNS

Sunflower oil prices are steadily climbing in Karnataka, with the price of a litre having increased from Rs 130 to Rs 170 over the last one week on account of some panic buying.

Traders are citing supply chain disruptions following the Russian invasion of Ukraine, which meets most of India's sunflower oil requirements, as the reason for the rising prices, and warned of further pain in coming days as the war rages on.

Officials in the Karnataka Oil Federation said the state is one of the biggest consumers of sunflower oil.

According to the Department of Food and Public Distribution, under the Union Ministry of Consumer Affairs, sunflower oil constitutes around 15% of all edible oil imports and is imported mainly from Ukraine.

"Karnataka consumes about 25,000-30,000 tonnes of sunflower oil per month. The shortage in supply has led to price rise," an official said.

Grocery shops and even wholesale dealers said there is some panic buying over the last two days.

"Wholesale rates have jumped by Rs 40 per litre, however, it has not completely reflected on retail scales yet," said Krishnam Sashidhar of Krishnam Oil Traders in Yelahanka.

▸ Sunflower, Page 4

07-02-2022 Dec Hrd Pg 01

Price of sunflower oil shoots up...

Sunflower, from Page 1

In Malleswaram and Rajajinagar, owners of some grocery shops said they have run out of the 5 and 10 litre cans of sunflower oil.

"The price of a 5 litre can has shot up to Rs 800 from Rs 650 just two months ago, of which the increase of Rs 100 happened within the last one week. One litre packets cost Rs 170 instead of Rs 130 last week," said Srinivas, who runs a provision store.

Officials at the Food and Civil Supplies Department held a meeting to understand the crisis and the measures needed to prevent hoarding. "At the moment, there is no big shortage. We have already reduced the stock limits for wholesale and retail traders," Additional Chief Secretary of the department Kapil Mohan told *DH*. "But we suspect some traders are hoarding the oil to get better prices. Instructions have been given to conduct surprise checks and take action in case of violation."

According to GC Reddy, Managing Director of The Karnataka Cooperative Oilseeds Growers Federation Limited, sunflower oil consumption in Bengaluru can go up to 900 tonnes per day. "The oil comes into the country through the ports in Gujarat, Andhra Pradesh, Mangaluru in our state and some other states. But ever since the war started, this supply has almost stopped, causing a jump in prices," he said. Most consumers are preferring to buy as much stock as possible at old prices.

"While the usual consumers are buying a litre or two extra, commercial customers like hotels are stocking up more cans as the prices are expected to shoot up further," said a person who works at Byraveshwara Traders in Vidyaranyapura.

Govt shelves plan to deliver foodgrains at doorstep

HUKKERI (BELAGAVI DIST), DHNS



The state government has dropped the plan to supply foodgrains at doorstep, Food and Civil Supplies Minister Umesh Katti has said.

Speaking to reporters in Bellada Bagewadi of Hukkeri taluk on Sunday, Katti said that foodgrains at doorstep scheme had failed in the neighbouring Andhra Pradesh and Tamil Nadu.

"A team of officers from our department studied the model in the neighbouring states. It was found that vehicles cannot enter narrow streets and hence the beneficiaries were being told to collect foodgrains from the vehicle parked elsewhere. The foodgrains were not being delivered as people did not arrive at the designated spot. In these circumstances, the Karnataka government too decided not to implement the scheme," the minister said.

Katti, who also happens to be forest minister, said that Rs 100 crore had been earmarked in the budget for erecting fences to check wild elephant menace in Hassan, Chikkamagaluru and Kodagu districts.

07-02-2022 Dec Hrd Pg 03